SHORT NOTICE QUESTIONS

Hunger Strike by prominent leaders of Bijapur District against construction of Narayanapura Dam

Q.—9. Sri S. M. GURADDI (Muddebihal).—

Will the Government be pleased to state :—

(*a*) whether it has come to the notice of the Government that about fifteen prominent leaders from Bijapur District have undertaken hunger strike, as a protest against the State Government's decision to take up the construction of Narayanapur Dam first in preference to the Almatti Dam of Upper Krishna Project ;

(*b*) whether members of this House and other leading persons from Bijapur District have represented to Government requesting them to take up Almatti Project first ?

A.—Sri S. NIJALINGAPPA (Chief Minister).—

(*a*) Yes.
(*b*) Yes.

Hunger Strike by prominent leaders of Bijapur District against construction of Narayanapura Dam

Q.—10. Sri C. M. DESAI (Sindgi).—

Will the Government be pleased to state :—

(*a*) whether it has come to the notice of the Government that about fifteen prominent leaders from Bijapur District have undertaken hunger strike as a protest against the State Government's decision to take up the construction of Narayanapur Dam first in preference to the Almatti Dam of Upper Krishna Project;

(*b*) whether members of this House and other leading persons from Bijapur District have represented to Government requesting them to take up Almatti Project first ?

A.—Sri S. NIJALINGAPPA (Chief Minister).—

(*a*) Yes.
(*b*) Yes.

ಶ್ರೀ ಎಸ್. ಎಂ. ಗುರಡ್ಡಿ.—ಪ್ಲಾನಿಂಗ್ ಕಮಿಷನ್ ಅವರು ನಾರಾಯಣಪುರದ ಅಣೆಕಟ್ಟನ್ನು ಕಟ್ಟುವುದಕ್ಕೆ ಮಾತ್ರ ಮಂಜೂರಾತಿಯನ್ನು ಕೊಟ್ಟಿದ್ದಾರೆ, ಆಲಮಟ್ಟಿಯಲ್ಲಿ ಕಟ್ಟಲಿಕ್ಕೆ ಅನುಮತಿಯನ್ನು ಕೊಟ್ಟಿಲ್ಲ ಎನ್ನುವುದು ನಿಜವೇ ?

†ಶ್ರೀ ಎಸ್. ನಿಜಲಿಂಗಪ್ಪ.—ಆಲಮಟ್ಟಿಯಲ್ಲಿ ಕಟ್ಟಿದರೆ ಬಹಳ ಅನುಕೂಲವಾಗುತ್ತದೆ, ಶೀಘ್ರದಲ್ಲಿ ಇದರಿಂದ ಪ್ರತಿಫಲವಾಗುತ್ತದೆ ಎಂದು ತಿಳಿದುಕೊಂಡು ಅದಕ್ಕೂ ಕೊಟ್ಟಿದ್ದಾರೆ. ನಾರಾಯಣಪುರದಲ್ಲಿ ಕಟ್ಟುವುದಕ್ಕೂ ಕೊಟ್ಟಿದ್ದಾರೆ. ಆಲಮಟ್ಟಿಯಲ್ಲಿ ಅಸ್ತಿಭಾರ ಹಾಕುವುದಕ್ಕೆ 30 ಲಕ್ಷ ರೂಪಾಯಿ ಆಗಬೇಕೆಂಬುದು ಅವರ ಅಭಿಪ್ರಾಯ.

ಶ್ರೀ ಎಸ್. ಎಂ. ಕೃಷ್ಣ.—ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಮುಖಂಡರಿಗೆ ಮಾನ್ಯಮಂತ್ರಿಗಳು ಎರಡು ಕಡೆಯಲ್ಲಿಯೂ ಜರಾತಿಯವನ್ನು ನಿರ್ಮಾಣ ಮಾಡುತ್ತೇವೆಂದೇ ನಾದರೂ ಆಶ್ವಾಸನೆಯನ್ನು ಕೊಟ್ಟಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಎರಡೂ ಕಡೆ ಪ್ರಾರಂಭ ಮಾಡುವುದನ್ನು ಸಾಧನೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ.—ಆಲಮಟ್ಟಿ ಮತ್ತು ನಾರಾಯಣಪುರ ಈ ಎರಡೂ ಕಡೆಗಳಲ್ಲಿ ಕಟ್ಟುವ ಅಣೆಕಟ್ಟಿನ ಒಟ್ಟು ಉದ್ದ ಎಷ್ಟು ಅದರ ಎತ್ತರ ಎಷ್ಟು ?

ಶ್ರೀ ಎಸ್. ನಿಜಲಿಂಗಪ್ಪ.—ಉದ್ದ ಎಷ್ಟು ಎತ್ತರ ಎಷ್ಟು ಎನ್ನುವ ವಿವರ ನನ್ನ ಹತ್ತಿರ ಇಲ್ಲ. ಸಾಕಷ್ಟು ಉದ್ದ ಎತ್ತರ ಇದೆ. ಆಲಮಟ್ಟಿಯದು ಇನ್ನೂ ಸ್ವಲ್ಪ ಅಗಲ ಮತ್ತು ಎತ್ತರ ಮಾಡಬಹುದು ಎನ್ನುವುದು ನರ್ಕಾರದ ಅಭಿಪ್ರಾಯ.

Sri A. S. PATIL.—May I know whether Almatti has got the highest storing capacity or Narayanapur ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಮಾಡಿರುವ ಪ್ರಕಾರ ಎರಡೂ ಸಾಧಾರಣವಾಗಿ ಅಷ್ಟೇ ಇದೆ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯಮಂತ್ರಿಗಳು ಅಣೆಕಟ್ಟೆಗಳ ಉದ್ದ ಮತ್ತು ಎತ್ತರವನ್ನು ಅಂದಾಜಾಗಿ ಹೇಳಿದರು. ಅಲ್ಲಿ ನರ್ವ ಕಾರ್ಯ ಮುಗಿದು ಖಚಿತವಾದ ಅಂದಾಜುಗಳು ಎಲ್ಲ ಅವರ ಮುಂದೆ ಇಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲ ಇದೆ. ಈಗ ಬಂದಿರತಕ್ಕ ಪ್ರಶ್ನೆ ಸತ್ಯಾಗ್ರಹ ವಗ್ಯೈರೆ ಮಾಡತಕ್ಕದ್ದು ಇದೆ. ಇನ್ನೊಂದು ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರ ಹೇಳುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಎರಡೂ ಕಡೆ ಪ್ರಾಜೆಕ್ಟ್ ಕೆಲಸವನ್ನು ತೆಗೆದುಕೊಂಡರೆ ಮೂರನೆ ಯೋಜನೆಗೆ ಇಟ್ಟಿರುವ 40 ಕೋಟಿ ರೂಪಾಯಿ ಸಾಲದೆ ಹೋಗುವ ಸಂಭವವಿದೆ. ಆದ್ದರಿಂದ ಈ ಕೆಲಸಗಳಿಗಾಗಿ ಕೇಂದ್ರದಿಂದ ಏನಾದರೂ ಸಹಾಯ ದೊರಕುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೇಂದ್ರದಿಂದ ಸಹಾಯ ಬಾರದೆ ಹೋದರೆ ಮೂರನೆಯ ಯೋಜನೆಯಲ್ಲಿಯೂ ಆಗುವುದಿಲ್ಲ, ನಾಲ್ಕನೆಯ ಯೋಜನೆಯಲ್ಲಿಯೂ ಆಗುವುದಿಲ್ಲ.

ಶ್ರೀ ಗೋಪಾಲರಾವ್ ಮುಡಬಿ.—ನಾರಾಯಣಪುರದ ಹತ್ತಿರ ಕಟ್ಟುವ ಕಟ್ಟೆಯ ಎತ್ತರವೆಷ್ಟು ?

ಶ್ರೀ ಎಸ್. ನಿಜಲಿಂಗಪ್ಪ.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆಂದು ತಿಳಿಸಿದೆ.

ಶ್ರೀ ಗಂಗಾಧರ ನಾಮೋಷಿ.—ಈ ಪ್ರಾಜೆಕ್ಟಿನ ಅಸ್ತಿಭಾರ ಶಿಲೆಯನ್ನು ಹಾಕುತ್ತೇವೆಂದು ಹೇಳಿದರು. ಬೇರೆ ಬೇರೆ ಕಡೆ ಅಸ್ತಿಭಾರ ಶಿಲೆಯನ್ನು ಹಾಕಿ ಆ ಕೆಲಸವನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಹಾಗೆಯೇ ಈ ಕೆಲಸವೂ ಆಗುತ್ತದೆಯೇ ? ಆ ವಿಚಾರದಲ್ಲಿ ಭರವಸೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅಸ್ತಿಭಾರ ಶಿಲೆಯನ್ನು ಹಾಕಿ ದುಡ್ಡಿಲ್ಲ ಎಂದು ಎಲ್ಲಿಯೂ ಹೇಳಲಲ್ಲ.

ಶ್ರೀಮತಿ ಬಸವರಾಜೇಶ್ವರಿ.—ನಾರಾಯಣಪುರ ಅಣೆಕಟ್ಟನ್ನು ಕಟ್ಟಲು ಎಷ್ಟು ಖರ್ಚಾಗುತ್ತದೆ, ಆಲಮಟ್ಟಿ ಅಣೆಕಟ್ಟನ್ನು ಕಟ್ಟಲು ಎಷ್ಟು ಖರ್ಚಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಒಂದು ನುವಾರು 53 ಕೋಟಿ ರೂಪಾಯಿ ಆಗುತ್ತದೆ, ಇನ್ನೊಂದಕ್ಕೂ ಹತ್ತಿರ ಹತ್ತಿರ ಅಷ್ಟೇ ಆಗುತ್ತದೆ. ಒಟ್ಟು ನಮ್ಮ ನಿರೀಕ್ಷೆ ಇರತಕ್ಕದ್ದು 120 ಕೋಟಿ ರೂಪಾಯಿ.

ಶ್ರೀ ಜೆ. ಎಲ್ ಕಬಾಡಿ.—ಆಲಮಟ್ಟಿ ಪ್ರಾಜೆಕ್ಟಿಗೆ ಖರ್ಚಾಗತಕ್ಕದ್ದು 15 ಕೋಟಿ ರೂಪಾಯಿ, ನಾರಾಯಣಪುರದಲ್ಲಿ ಆಗುವುದಕ್ಕೆ 26 ಕೋಟಿ ರೂಪಾಯಿ ! ಹೆಚ್ಚು ನೀರು ಹಿಡಿಯುವ ಶಕ್ತಿಯೂ ಇಲ್ಲದೆ ಹೆಚ್ಚು ಮುಳುಗಡೆಯಾಗತಕ್ಕದ್ದು ನಾರಾಯಣಪುರದಲ್ಲಿ. ಅದಕ್ಕಿಂತಲೂ ಕಡಮೆ ಮುಳುಗಡೆಯಾಗತಕ್ಕದ್ದು ಎಂದರೆ ಆಲಮಟ್ಟಿಯಲ್ಲಿ. ಇಲ್ಲಿಯೇ ಏಕೆ ಕಟ್ಟಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಆಲಮಟ್ಟಿ ಮತ್ತು ನಾರಾಯಣಪುರ ಎರಡೂ ಕಡೆ ಕಟ್ಟಬೇಕೆಂದು ಒಪ್ಪರವಾಗಿದೆ. ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಎರಡೂ ಕಡೆಯೂ ಒಟ್ಟಿಗೇ ಕಟ್ಟಿಕೊಂಡು ಹೋಗಬೇಕು ಎನ್ನುವುದು ನರ್ಕಾರದ ಖಚಿತವಾದ ಅಭಿಪ್ರಾಯ.

1-00 P.M.

Sri M. Y. GHORPADE.—Sir, will these two dams ultimately utilise 226 Tmcft. of water and irrigate 12.5lakhs of acres which is the planned capacity of the Upper-Krishna?

Sri S. NIJALINGAPPA.—The planned capacity is known. It is to irrigate about 12 lakhs of acres of land and utilise about 200 Tmcft. of water.

Sri S. SIVAPPA.—What is the storage capacity of Almatti and Narayanapur dams both put together?

Sri S. NIJALINGAPPA—The capacity of both the dams is practically the same.

ಶ್ರೀ ಎಸ್. ಎಂ. ಗುರಡ್ಡಿ.—ಬಿಜಾಪುರ ಜಿಲ್ಲೆಗೆ ಹೆಚ್ಚು ಪ್ರಮಾಣದಲ್ಲಿ ನೀರಾವರಿಯಾಗಬೇಕಾದರೆ ಆಲಮಟ್ಟಿ ಆಣೆ ಹೊರತು ಬೇರೆ ಯೋಜನೆಯಿಂದ ಸಾಧ್ಯವಿಲ್ಲ, ಅಲ್ಲಿಗೆ ಆಲಮಟ್ಟಿಯಿಂದ ಹೆಚ್ಚಿನ ನೀರಿನ ಸೌಕರ್ಯ ದೊರೆಯುತ್ತದೆ ಎಂಬುದು ಸರಕಾರಕ್ಕೆ ಗೊತ್ತಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು, ಲಿಫ್ಟ್ ಇರಿಗೇಷನ್ ಮಾಡಿದರೆ ಇನ್ನೂ ಒಂದುವರೆ ಲಕ್ಷ ಎಕರೆ ಹೆಚ್ಚಾಗುತ್ತದೆ.

ಶ್ರೀ ಎಸ್. ಎಂ. ಗುರಡ್ಡಿ.—ಅದಕ್ಕೇನು ಪ್ರಯತ್ನ ಮಾಡುತ್ತಿದ್ದೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆಲಮಟ್ಟಿ ಒಂದನ್ನು ಕಟ್ಟಿಸಿದರೆ ಎಷ್ಟು ಅಚ್ಚುಕಟ್ಟಾಗುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ಎರಡೂ ಕೂಡ ಆರು ಲಕ್ಷ ಆಗುತ್ತದೆ; ಈ ಎರಡೂ ಹೆಚ್ಚು ಕಡಿಮೆ ಒಂದೇ ಕೆಪ್ಯಾಸಿಟಿ ಎಂದು ಹೇಳಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ.—ನಾರಾಯಣಪುರದಲ್ಲಿ ಮೇಜರ್ ಡ್ಯಾಮ್ ಕಟ್ಟಿ, ಆಲಮಟ್ಟಿಯಲ್ಲಿ ಕೇವಲ ಒಂದು ಸಣ್ಣ ಕಟ್ಟೆ ಕಟ್ಟುತ್ತಾರೆಂದು ಬೀಜಾಪುರದಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಸತ್ಯಾಗ್ರಹ ನಡೆಯುತ್ತಿರುವುದರಲ್ಲಿ ಸ್ವಲ್ಪ ರಾಜಕೀಯವಿದೆ. ಎಲ್ಲ ರಾಜಕೀಯ ಪಕ್ಷಗಳವರೂ ಸೇರಿಕೊಂಡು ಉಪವಾಸ ಮತ್ತು ಪ್ರದರ್ಶನ ಮಾಡಲು ಪ್ರಾರಂಭಿಸಿದ್ದಾರೆ, ಅದಕ್ಕೆ ಯಾವ ರೀತಿಯ ಸಕಾರಣವೂ ಇಲ್ಲ. ನಾನು ಈ ಸಭೆಯಲ್ಲಿಯೂ ಹೊರಗೂ ಹೇಳಿದ್ದೇನೆ, ಎರಡನ್ನೂ ಕಟ್ಟುವುದಕ್ಕೆ ಸಾಧ್ಯವಿದೆ ಎಂದು ಅದರೂ ಸತ್ಯಾಗ್ರಹ ಮಾಡುತ್ತಿದ್ದರೆ, ಮಾಡಲಿ ಬಾರದೆಂದು ನಮ್ಮ ಪಕ್ಷದವರಿಗೆ ನಾವೂ ಹೇಳುತ್ತೇವೆ, ನಿಮ್ಮ ಪಕ್ಷದವರಿಗೆ ನೀವೂ ಹೇಳಿ.

No. of Cattle that died due to Rinderpest Disease

Q.—11. Sri K. DEVAYYA (Malleswaram).—

Will the Government be pleased to state:—

(*a*) the number of cattle attacked and that have died as a result of Rinderpest disease in Bangalore City including Rajajinagar and Yelahanka within the last few days;

(*b*) the number of deaths in Malleswaram in one house on 16th March 1964 and what is the total loss;

(*c*) the number of inoculations done to the cattle in the above areas

(*d*) the preventive measure taken by authorities, in this behalf;

(*e*) whether they are having the necessary quantity of vaccine in stock.